ಮುಖಭಾವವನ್ನು ನನ್ನ ಜೀವನದಲ್ಲೇ ಒಂದೆರಡು ಬಾರಿ ಮಾತ್ರ ನೋಡಿದ್ದೇನಷ್ಟೆ; ಅದನ್ನು ಅಪಾರ್ಥ ಮಾಡಿಕೊಳ್ಳಲಾಗದು. ಅದು ಸಾವಿನ ಅಂಚಿನಲ್ಲಿರುವ ವ್ಯಕ್ತಿಯೊಬ್ಬನ ಮುಖ. ನಾನು ಹೇಳುತ್ತಿರುವುದು ಸರಿಯೋ ತಪ್ಪೋ?'

'ಹೌದು ನಿಜ. ಆ ವೈದ್ಯ ನನಗೆ ಎರಡು ತಿಂಗಳ ಗಡುವು ಕೊಟ್ಟಿದ್ದಾನೆ.'

'ನಿನಗೆ ಯೋಚಿಸಲು ಬೇರೆ ವಿಚಾರಗಳು ಇದ್ದುದರಿಂದ, ನೀನು ನನ್ನ ಕಡೆ ನೋಡಲಿಲ್ಲ. ಇದೆಲ್ಲಾ ಬಿಟ್ಟು ಬೇರೇನೊ ಒಂದನ್ನು ನಿನ್ನ ಮುಖದ ಮೇಲೆ ನೋಡಿದೆ. ಇವತ್ತು ಮಧ್ಯಾಹ್ನ ಜನರು ಮರೆಮಾಚಲು ಪ್ರಯತ್ನಿಸುತ್ತಾರೆ ಎಂದು ಹೇಳಿದೆನಲ್ಲಾ ಅಂತಹದ್ದು. ನಿನ್ನ ಮುಖದಲ್ಲಿ ನನಗೆ ದ್ವೇಷ ಕಾಣಿಸಿತು, ಅದನ್ನು ನೀನು ರಹಸ್ಯವಾಗಿಡಲು ಹೋಗಲಿಲ್ಲ. ಏಕೆಂದರೆ ಅಲ್ಲಿ ನಿನ್ನನ್ನು ಗಮನಿಸುವವರು ಯಾರೂ ಇಲ್ಲವೆಂದು ನೀನೆಂದುಕೊಂಡಿದ್ದೆ.'

'ಮುಂದುವರೆಸು' ಹ್ಯಾರಿಸನ್ ಹೇಳಿದ.

'ಹೇಳಲು ಇನ್ನೇನು ಇಲ್ಲ. ನಾನು ಇಲ್ಲಿಗೆ ಬಂದೆ, ಆಕಸ್ಮಿಕವಾಗಿ ಲ್ಯಾಂಗ್ಟನ್ ಹೆಸರನ್ನು ನಂಜಿನ ಪುಸ್ತಕದಲ್ಲಿ ನೋಡಿದೆ. ನಂತರ ಅವನನ್ನು ಭೇಟಿ ಮಾಡಿದೆ, ಆಮೇಲೆ ನಿನ್ನಲ್ಲಿಗೆ ಬಂದೆ. ನಿನಗೆ ಬಲೆ ಬೀಸಿದೆ. ಸಯನೈಡ್ ತರಲು ನೀನು ಲ್ಯಾಂಗ್ಟನ್‌ಗೆ ಹೇಳಿದ್ದನ್ನು ಅಲ್ಲಗೆಳೆದೆ. ಜೊತೆಗೆ ಅದನ್ನು ನಾನು ಪ್ರಸ್ತಾಪಿಸಿದಾಗ ನೀನು ಆಶ್ಚರ್ಯ ವ್ಯಕ್ತಪಡಿಸಿದೆ. ಮೊದಲಿಗೆ ನಾನು ಬಂದದ್ದನ್ನು ನೋಡಿ ನೀನು ಬೆರಗಾದಂತೆ ಕಂಡೆ. ಆದರೆ, ನಿನ್ನ ಯೋಜನೆಯಲ್ಲಿ ನನ್ನ ಪಾತ್ರದ ಉಪಯೋಗದ ಅರಿವಾಯಿತು. ಹಾಗಾಗಿ ನನ್ನ ಅನುಮಾನಗಳನ್ನು ನೀನು ಪ್ರೇರೇಪಿಸಿದೆ. ಲ್ಯಾಂಗ್ಟನ್ ಎಂಟುವರೆ ಗಂಟೆಗೆ ಇಲ್ಲಿಗೆ ಬರುತ್ತಾನೆಂದು ಅವನಿಂದಲೇ ನನಗೆ ಗೊತ್ತಾಗಿತ್ತು. ಆದರೆ, ನೀನು ನನಗೆ ಲ್ಯಾಂಗ್ಟನ್ ಒಂಬತ್ತು ಗಂಟೆಗೆ ಬರುತ್ತಾನೆಂದು ಹೇಳಿದೆ. ಏಕೆಂದರೆ ನಾನು ಬಂದು ನೋಡಿದಾಗ ಎಲ್ಲವೂ ಮುಗಿದು ಹೋಗಿರುತ್ತದೆ ಎಂಬುದು ನಿನ್ನ ಯೋಚನೆಯಾಗಿತ್ತು. ಇವೆಲ್ಲವುಗಳಿಂದ ನಿನ್ನ ಯೋಜನೆಯ ಸಂಪೂರ್ಣ ಚಿತ್ರಣ ನನಗೆ ಸಿಕ್ಕಿತು.'

'ನೀನೇಕೆ ಇಲ್ಲಿಗೆ ಬಂದೆ?' ಹ್ಯಾರಿಸನ್ ಜೋರಾಗಿ ಕೇಳಿದ. 'ನೀನು ಇಲ್ಲಿಗೆ ಬಂದಿರದಿದ್ದರೆ!...'

ಪ್ವರೊ ಸ್ವಲ್ಪ ಮೌನದ ನಂತರ ಹೇಳಿದ. 'ನಾನು ಹೇಳಿದಂತೆ ಹತ್ಯೆಯ ತನಿಖೆಯೇ ನನ್ನ ವೃತ್ತಿ.'

'ಹತ್ಯೆ? ಅಲ್ಲ, ಅದು ಆತ್ಮಹತ್ಯೆ.'

'ಅಲ್ಲ, ನಾನು ಹೇಳಿದ್ದು ಹತ್ಯೆಯೇ. ನೀನು ಸಯನೈಡ್ ತೆಗೆದುಕೊಂಡು ನೋವಿಲ್ಲದೆ ಸಾಯಬೇಕೆಂದುಕೊಂಡಿದ್ದೆ. ಅದು ಆತ್ಮಹತ್ಯೆ ನಿಜ. ನಿನ್ನ ಅನಾರೋಗ್ಯದ ಕಾರಣ ಇನ್ನು ಕೆಲವು ತಿಂಗಳಲ್ಲಿ ಬರುತ್ತಿದ್ದ ಸಾವನ್ನು ಸ್ವಲ್ಪ ಮುಂಚೆಯೇ ನರಳಾಟವಿಲ್ಲದೆ ಆಲಂಗಿಸಿಕೊಳ್ಳಲು ಮನಸ್ಸು ಮಾಡಿದ್ದೆ. ಆದರೆ, ನಿನ್ನ ನೊಂದಿರುವ ಆ ಮನಸ್ಸಿನಲ್ಲಿ ಮತ್ತೊಂದು ಪಾಪದ ಪಿತೂರಿಯಿತ್ತು. ಲ್ಯಾಂಗ್ಟನ್ ತನ್ನ ಹೆಸರಿನಲ್ಲಿ ವಿಷ ಖರೀದಿಸಿದ್ದ. ನೀನು ಒಬ್ಬಂಟಿಯಾಗಿರುವಾಗ ಅವನು ನಿನ್ನನ್ನು ನೋಡಲು ಬರುತ್ತಾನೆ, ನೀನು ಹಠಾತ್ತನೆ ಸಾಯುತ್ತೀಯಾ, ಸಯನೈಡ್ ನಿನ್ನ ಲೋಟದಲ್ಲಿ ಸಿಗುತ್ತದೆ. ನಿನ್ನ ಸಾವು ಬಂದಿರುವುದು ವಿಷದಿಂದಲೇ ಎಂದು ಗೊತ್ತಾದ ಕೂಡಲೇ ಪೊಲೀಸರು ಲ್ಯಾಂಗ್ಟನ್‌ನನ್ನು ಬಂಧಿಸುತ್ತಾರೆ. ಅವನು ತನ್ನ ಯೌವನದ ಸಮಯವನ್ನು ಜೈಲಿನಲ್ಲಿ ಕಳೆದು ಕೊನೆಗೆ ನೇಣುಗಂಬವೇರುತ್ತಾನೆ. ನಿನ್ನ ಭಾವಿ ಪತ್ನಿಯನ್ನು ಕಸಿದುಕೊಂಡ ಲ್ಯಾಂಗ್ಟನ್ ಮೇಲೆ ಸೇಡು ತೀರಿಸಿಕೊಳ್ಳಲು ನಿನ್ನ ಜೀವವನ್ನೇ ಕೊಡಲು ಸಿದ್ಧನಾಗಿದ್ದೆ. ಇದು ನಿನ್ನ ಮನಸ್ಸಿನಲ್ಲಿದ್ದ ಯೋಜನೆ.'

'ಆದರೆ, ನೀನು ಇಲ್ಲಿಗೇಕೆ ಬಂದೆ? ಬಂದ ಕಾರಣವಾದರು ಏನು?' ಎಂದು ಮತ್ತೆ ಹ್ಯಾರಿಸನ್ ಹಲುಬಿದ.